ಕರ್ನಾಟಕ ಸರ್ಕಾರ
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ
DEPARTMENT OF STATE EDUCATIONAL RESEARCH AND TRAINING
No. 4, 100 FT RING ROAD, BANASHANKARI 3rd STAGE, BENGALURU - 560 085
E-mail: ntse.dsert.ka@nic.in

ಸಂಖ್ಯೆ: DSERT/NTSE/ ಅಂ.ಮಾ.02 /01/2020-21 ದಿನಾಂಕ: 06-09-2021

ಸುತ್ತೋಲೆ.

ವಿಷಯ: EMTIP-1, 2 ಮತ್ತು EMTIP-3 ಆಂಗ್ಲ ಮಾಧ್ಯಮ (ದ್ವಿಭಾಷಾ) ತರಗತಿಗೆ ಬೋಧಿಸುವ ಶಿಕ್ಷಕರಿಗೆ ತರಬೇತಿ ನೀಡುವಾಗ ಪಿ.ಎಸ್.ಟಿ. ಶಿಕ್ಷಕರನ್ನು ಮಾತ್ರ ಆಯ್ಕೆಮಾಡುವ ಕುರಿತು.

*****

ಸರ್ಕಾರಿ ಕನ್ನಡ ಮತ್ತು ಉರ್ದು ಶಾಲೆಗಳಲ್ಲಿ 2019-20 ಮತ್ತು 2020-21ನೇ ಸಾಲಿನಲ್ಲಿ ಪ್ರಾರಂಭಿಸಿರುವ ಆಂಗ್ಲ ಮಾಧ್ಯಮ ವಿಭಾಗಗಳ ತರಗತಿಗಳಲ್ಲಿ ಬೋಧಿಸುವ ಶಿಕ್ಷಕರಿಗೆ EMTIP-1, EMTIP 2 ಮತ್ತು EMTIP-3 ತರಬೇತಿ (ಕನ್ನಡ ಮತ್ತು ಉರ್ದು ಮಾಧ್ಯಮ) ಯನ್ನು ತಾಲ್ಲೂಕು ಮತ್ತು ಜಿಲ್ಲಾ ಹಂತದಲ್ಲಿ ನೀಡಲಾಗುತ್ತಿದೆ. EMTIP-1, EMTIP 2 ಮತ್ತು EMTIP-3 ತರಬೇತಿಯನ್ನು ನೀಡಲು ಶಿಕ್ಷಕರನ್ನು ಆಯ್ಕೆ ಮಾಡುವ ಸಂದರ್ಭದಲ್ಲಿ ಪಿ.ಎಸ್.ಟಿ ಶಿಕ್ಷಕರನ್ನು **(1 ರಿಂದ 5ನೇ ತರಗತಿಗೆ ಬೋಧಿಸುವ ಶಿಕ್ಷಕರು ಮಾತ್ರ)** ಮಾತ್ರ ಆಯ್ಕೆ ಮಾಡಬೇಕು. ಕೆಲವು ಕಡೆ ಪದವೀಧರ ಶಿಕ್ಷಕರನ್ನು / ಪದವೀಧರ ಆಂಗ್ಲ ಶಿಕ್ಷಕರನ್ನು ಆಯ್ಕೆ ಮಾಡಿ ತರಬೇತಿಗೆ ನಿಯೋಜಿಸಿರುವುದು ಇಲಾಖೆಯ ಗಮನಕ್ಕೆ ಬಂದಿರುತ್ತದೆ. ಇಂತಹ ಪ್ರಕರಣಗಳು ಇದ್ದಲ್ಲಿ ನಿಯೋಜಿಸಿರುವ ಮುಖ್ಯಶಿಕ್ಷಕರು / ಸಿ.ಆರ್.ಪಿ / ಬಿ.ಆರ್.ಸಿ / ಕ್ಷೇತ್ರಶಿಕ್ಷಣಾಧಿಕಾರಿಗಳು ನೇರ ಹೊಣೆಯನ್ನು ಹೊರಬೇಕಾಗುತ್ತದೆ ಮತ್ತು ಅಂತಹ ಶಿಕ್ಷಕರಿಗೆ ತರಬೇತಿ ನೀಡಲು ಖರ್ಚಾಗಿರುವ ಅನುದಾನವನ್ನು ನಿಯೋಜನೆಗೆ ಕ್ರಮವಹಿಸಿರುವ ಅಧಿಕಾರಿ / ಶಿಕ್ಷಕರ ವೇತನದಲ್ಲಿ ಕಟಾಯಿಸಲು ಶಿಫಾರಸ್ಸು ಮಾಡಲಾಗುವುದು.

ಶಾಲೆಯಲ್ಲಿ ಶಿಕ್ಷಕರು ಲಭ್ಯವಿಲ್ಲದಿದ್ದಲ್ಲಿ ನಿಯೋಜನೆಯ ಮೇರೆಗೆ ಕಾರ್ಯನಿರ್ವಹಿಸುವ ಶಿಕ್ಷಕರಿಗೆ ಅಥವಾ ಮೇಲಧಿಕಾರಿಗಳು ಸೂಚಿಸುವ ಶಿಕ್ಷಕರಿಗೆ ತರಬೇತಿಯನ್ನು ನೀಡಬೇಕಾಗುತ್ತದೆ. ಈ ಸಂಬಂಧ ತರಬೇತಿಯ ಕೋಆರ್ಡಿನೇಟರ್ ಹಾಗೂ ನೋಡಲ್ ಅಧಿಕಾರಿಗಳು ತರಬೇತಿಯು ಪ್ರಾರಂಭವಾಗುವ ಮುನ್ನ ಖಾತ್ರಿಪಡಿಸಿಕೊಳ್ಳುವುದು. ಪ್ರಾಂಶುಪಾಲರು ಈ ಸಂಬಂಧ ತರಬೇತಿಯ ಮೇಲುಸ್ತುವಾರಿಯವರಿಂದ ಮಾಹಿತಿಯನ್ನು ಪಡೆದು ಖಾತ್ರಿಪಡಿಸಿಕೊಳ್ಳಲು ಸೂಚಿಸಿದೆ.

ನಿರ್ದೇಶಕರು,
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ,
ಬೆಂಗಳೂರು.

ಗೆ,

1. ರಾಜ್ಯದ ಎಲ್ಲಾ ಡಯಟ್ ಪ್ರಾಂಶುಪಾಲರಿಗೆ ತುರ್ತು ಕ್ರಮಕ್ಕಾಗಿ.
2. ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ) ರವರಿಗೆ ಅಗತ್ಯ ಕ್ರಮಕ್ಕಾಗಿ
3. ರಾಜ್ಯದ ಎಲ್ಲಾ ಕ್ಷೇತ್ರಶಿಕ್ಷಣಾಧಿಕಾರಿಗಳಿಗೆ ಸಂಬಂಧಿಸಿದ ಉಪನಿರ್ದೇಶಕರು ಆಡಳಿತ ರವರ ಮೂಲಕ ಅಗತ್ಯ ಕ್ರಮಕ್ಕಾಗಿ.
4. ರಾಜ್ಯದ ಎಲ್ಲಾ ಕ್ಷೇತ್ರ ಸಂಪನ್ಮೂಲ ಸಮನ್ವಯಾಧಿಕಾರಿಗಳಿಗೆ ಡಯಟ್ ಪ್ರಾಂಶುಪಾಲರ ಮೂಲಕ ಅಗತ್ಯ ಕ್ರಮಕ್ಕಾಗಿ.

ಪ್ರತಿಗಳು :

1. ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು ಇವರಿಗೆ ವಂದನಾಪೂರ್ವಕವಾಗಿ ಗೌರವಗಳೊಂದಿಗೆ ಮಾಹಿತಿಗಾಗಿ ಸಲ್ಲಿಸಿದೆ.

Scanned with OKEN Scanner